ಅಧ್ಯಯನ ಕೇಂದ್ರ ಶುರುವಾದ ಮೇಲೆ ಜಗತ್ತಿನಲ್ಲಿ ಸ್ತ್ರೀವಾದ ಹೇಗಿದೆ ಅಂತ ತಿಳಿದುಕೊಳ್ಳಲು ಓದಲು ಶುರುಮಾಡಿದೆ. ಸ್ತ್ರೀವಾದ ಅಂದರೆ ಏನು ಅಂತ ಅರ್ಥಮಾಡಿಕೊಳ್ಳಲು ಶುರುಮಾಡಿದೆ. ಯುಜಿಸಿ ಅನುದಾನ ಸಿಕ್ಕ ಮೇಲೆ ಎಂ.ಎ. ತರಗತಿಗಳು ಶುರುಮಾಡಲು ಅವಕಾಶ ಸಿಕ್ಕಿತು. ತರಗತಿಗಳಿಗೆ ಪಠ್ಯಕ್ರಮ, ಪಠ್ಯ ಎಲ್ಲ ರೂಪಿಸಬೇಕಾಯಿತು. ಆ ಕಾಲಕ್ಕೆ ಮಹಿಳಾ ಅಧ್ಯಯನದ ವಿಭಾಗ ಅಂತ ಇದ್ದಿದ್ದು ಬೆಂಗಳೂರಿನ ಎನ್‌ಎಂಕೆಆರ್‌ವಿ ಕಾಲೇಜಿನಲ್ಲಿ ಮಾತ್ರ. ಅಲ್ಲೂ ಸೂಕ್ತವಾದ ಪಠ್ಯಕ್ರಮ ಇರಲಿಲ್ಲ. ಮಹಿಳಾ ಅಧ್ಯಯನ ಎಂದರೆ ಅಂತರ ಶಿಸ್ತೀಯ ಅಧ್ಯಯನ. ಇದರ ಕುರಿತು ಎಷ್ಟು ತಪ್ಪು ಗ್ರಹಿಕೆಗಳಿದ್ದವು ಅಂದರೆ ಇತಿಹಾಸ, ಅರ್ಥಶಾಸ್ತ್ರ, ಸಾಹಿತ್ಯ ಹೀಗೆ ಎಲ್ಲ ವಿಭಾಗಗಳಲ್ಲಿ ಸಾಧನೆ ತೋರಿದ ಮಹಿಳೆಯರನ್ನು ಮತ್ತು ಅವರ ಕೆಲಸಗಳನ್ನು ಪಟ್ಟಿ ಮಾಡುವುದು. ಈ ತರಹದ ಪಠ್ಯಕ್ರಮವನ್ನೇ ಅನುಸರಿಸುತ್ತಿದ್ದರು. ಆಗ ಪಠ್ಯಕ್ರಮವನ್ನೇ ಹೊಸದಾಗಿ ರೂಪಿಸುವ ಸಲುವಾಗಿ ಅಮೆರಿಕ ಮತ್ತಿತರ ಕಡೆಯ ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನದ ಪಠ್ಯಕ್ರಮ ಹೇಗಿರುತ್ತೆ? ಪಠ್ಯಗಳ ಸ್ವರೂಪ ಏನು ಅಂತೆಲ್ಲ ಹುಡುಕಿ ನೋಡಿ ಪ್ರಯೋಗಕ್ಕೆ ಮುಂದಾದೆ. ಬೇರೆಬೇರೆ ಕಡೆಯ ಪಠ್ಯಕ್ರಮಗಳನ್ನು ನೋಡಿದಾಗ ಜ್ಞಾನವಲಯಗಳನ್ನ ಪ್ರಶ್ನಿಸೋದೇ ಮಹಿಳಾ ಅಧ್ಯಯನದ ಕೆಲಸ ಅನ್ನೋ ಐಡಿಯಾ ಸ್ಪಷ್ಟವಾಗಿತ್ತು. ಮಹಿಳೆಯರ ಪರವಾಗಿ ಬರೆಯುತ್ತಿದ್ದ ವಿವಿಧ ವಿಭಾಗಗಳಲ್ಲಿದ್ದವರನ್ನು ಒಟ್ಟಿಗೆ ಸೇರಿಸಿ ಪಠ್ಯಕ್ರಮ ರೂಪಿಸುವ ಸಲುವಾಗಿ ಕಾರ್ಯಾಗಾರಗಳನ್ನ ಮಾಡಿದೆವು. ಪಠ್ಯಕ್ರಮವನ್ನು ಮರುರೂಪಿಸುವಾಗ ಎಲ್ಲ ವಿಷಯಗಳ ಹಿಂದೆನೂ ಸ್ತ್ರೀವಾದ ಅನ್ನುವ ಐಡಿಯಾ ಇರಬೇಕು ಎನ್ನುವ ಉದ್ದೇಶವಿತ್ತು. ಉದಾಹರಣೆಗೆ ಸ್ತ್ರೀವಾದಿ ಸಮಾಜಶಾಸ್ತ್ರ,

